



ಸದ್ಯದ ಸ್ಥಿತಿಯನ್ನು ಕಾಣುವಾಗ ಹೃದಯ ಚುರುಗುಟ್ಟುತ್ತದೆ. ಕೋಟೆಯೊಳಗೆ ಮನೆ – ಬಿಡಾರ ಮಾಡಿಕೊಂಡವರು ಯಾರೂ ಇಲ್ಲಿನ ಕಟ್ಟಡಗಳ ಬಗ್ಗೆಯಾಗಲೀ, ಪ್ರದೇಶವನ್ನು ಸ್ವಚ್ಛವಾಗಿಡುವ ಬಗ್ಗೆಯಾಗಲೀ ಗಮನ ಹರಿಸಿದಂತಿಲ್ಲ. ನಮ್ಮ ನಾಡಿನ ಹಿರಿಮೆಯನ್ನು ಸಾರುವ ಈ ಪ್ರದೇಶ, ಆಂಧ್ರಪ್ರದೇಶ ಸರಕಾರದ ವಶದಲ್ಲಿದೆ. ಆದರೆ ಇಲ್ಲಿಗೆ ಬರುವ ಪ್ರವಾಸಿಗರಿಗೆ ಉಪಯೋಗವಾಗುವಂತಹ ಯಾವ ಸೌಲಭ್ಯಗಳೂ ಇಲ್ಲಿಲ್ಲ. ಉಪಾಹಾರ ಗೃಹ, ಕುಡಿಯುವ ನೀರಿನ ವ್ಯವಸ್ಥೆ, ಶೌಚಾಲಯ, ಉತ್ತಮ ಮಾರ್ಗದರ್ಶಕರು ಮುಂತಾದ ಪ್ರವಾಸಿ ಸೌಲಭ್ಯಗಳನ್ನು ಒದಗಿಸಲು ಅಲ್ಲಿನ ಸರಕಾರ ಆಸಕ್ತಿ ತೋರಿಸಿದಂತಿಲ್ಲ. ಪ್ರವಾಸಿಗರಿಗೆ ಸೂಕ್ತ ಸೌಲಭ್ಯ ಒದಗಿಸಿದರೆ ಕರ್ನಾಟಕದಿಂದಲೇ ಸಾವಿರಾರು ಪ್ರವಾಸಿಗಳು ಈ ಸಾಂಸ್ಕೃತಿಕ ಪರಂಪರೆಯ, ಪ್ರಕೃತಿ ವಿಸ್ಮಯದ ಪ್ರದೇಶಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಭೇಟಿ ನೀಡಬಹುದು.

ಇಲ್ಲಿಂದ ಸ್ವಲ್ಪ ದೂರದಲ್ಲಿ ಆಂಧ್ರಪ್ರದೇಶ ಪ್ರವಾಸೋದ್ಯಮ ಇಲಾಖೆಯ ಒಂದು ಹೋಟೆಲ್ ಇದೆ. ಸ್ವಲ್ಪ ದುಬಾರಿಯೆನಿಸಿದರೂ, ಉಳಿದುಕೊಳ್ಳಲು ಇಲ್ಲಿ ಕೊಠಡಿಗಳೂ, ಉಪಾಹಾರದ ವ್ಯವಸ್ಥೆಯೂ ಇದೆ. ಜಮ್ಮಲಮಡುಗುವಿನಿಂದ ಗಂಡೀಕೋಟಾಕ್ಕೆ ಬಸ್ ಸೌಕರ್ಯವೂ ಇದೆ.

ಕನ್ನಡ ನಾಡಿನ ಭವ್ಯ ಪರಂಪರೆಯನ್ನು ತಿಳಯಲು ಹಾಗೂ ಪ್ರಕೃತಿಯ ವಿಸ್ಮಯವನ್ನು ವೀಕ್ಷಿಸಲು ಒಮ್ಮೆ ಗಂಡೀಕೋಟಾಕ್ಕೆ ಭೇಟಿ ನೀಡಲೇಬೇಕು. ಪೆನ್ನಾ ನದಿಯ ದಂಡೆಯಲ್ಲಿರುವ ಬೃಹತ್ ಕೆಂಪು ಗ್ರಾನೈಟ್ ಬಂಡೆಗಳ ಮೇಲೆ ಕುಳಿತು ಸೂರ್ಯೋದಯವನ್ನು ವೀಕ್ಷಿಸುವುದು ಒಂದು ಅವಿಸ್ಮರಣೀಯ ಅನುಭವ. ಇತಿಹಾಸದ ಭವ್ಯತೆಯ ಜತೆಗೆ ಪ್ರಕೃತಿಯ ಅನುಪಮ ಸೌಂದರ್ಯವೂ ಸೇರಿ ಈ ತಾಣ ನಿಮ್ಮ ಮನಸೂರೆಗೊಳ್ಳುವುದು ಖಂಡಿತ.

